ಅಧ್ಯಕ್ಷರು : ಸರ್ಕಾರ ರಾತ್ರಿ ಹತ್ತು ಗಂಟೆಯ ನಂತರ ಕೂಡ ಯಕ್ಷಗಾನ ಕಲಾವಿದರಿಗೆ ಕೊಡುವುದಕ್ಕೆ ಪುನರ್ ಪರಿಶೀಲನೆ ಮಾಡುವುದಕ್ಕೆ ಅವರಿಗೆ ಒಂದು ಸೂಚನೆಯನ್ನು ಕೊಡುತ್ತೇನೆ. ಈಗ ಈ ಪ್ರಶ್ನೆಯನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಶ್ರೀ ಮುದ್ದ ಹನುಮೇಗೌಡರ ಪ್ರಶ್ನೆ.

ಶ್ರೀ ಕುಂಬ್ಳೆ ಸುಂದರ್ ರಾವ್ : ದಯವಿಟ್ಟು ಒಂದು ಮಾತು. ಮೊನ್ನೆ ನಾನು ಇದೇ ಮನೆಯಲ್ಲಿ ಇದೇ ವಿಷಯದ ಬಗ್ಗೆ ಧರಣಿ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದರು. ಒಪ್ಪಿದ ಮೇಲೂ ಇದು ತಪ್ಪಿ ಹೋಗುತ್ತಿದೆ ಎಂದರೆ ಇಲ್ಲಿ ಯಾರದು ಕೈವಾಡ? ಏಕೆ ನಮ್ಮ ಮೇಲೆ ನಿಮಗೆ ಹಗೆ? ಎಲೆ ಅಡಿಕೆ ಹಾಕಿಕೊಳ್ಳುತ್ತಾರೆ ಎಂದರೆ ಉಗಿಯುತ್ತಾರೆ ಎಂದು ನಿಮ್ಮ ಅನುಮಾನವೇ? ಅವರು ಒಪ್ಪಿದ್ದು ಮಾತ್ರವಲ್ಲ. ಅಲ್ಲಿ ಏನಾದರೂ ಡ್ಯಾಮೇಜ್ ಆದರೆ ದಂಡ ವಸೂಲಿ ಮಾಡಬೇಕು ಎಂದು ಹೇಳುವುದನ್ನೂ ನಾನು ಒಪ್ಪಿದ್ದೆವು.

(ಗೊಂದಲ)

ಶ್ರೀ ಕುಂಬ್ಳೆ ಸುಂದರ್ ರಾವ್ : ಕಲೆ ಸಂಸ್ಕೃತಿ ಬಗ್ಗೆ ಸಂಸ್ಕೃತಿ ಇಲಾಖೆಯವರು ಹೀಗೆ ಮಾಡಿದರೆ ಹೇಗೆ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಕಲಾವಿದರ ಬಗ್ಗೆ ಅನುಭವ ಇಲ್ಲದವರು.

ಅಧ್ಯಕ್ಷರು : ಸುಂದರ್‌ರಾಯರೇ, ಮಾನ್ಯ ಮುಖ್ಯಮಂತ್ರಿಗಳು ನಿಮ್ಮಂಥವರು. ಮಾನ್ಯ ಮಂತ್ರಿಗಳಿಗೆ ಅಷ್ಟು ಕಲಾಭಿಮಾನ ನಿಮ್ಮ ಪ್ರಮಾಣದ್ದು ಇಲ್ಲ. ಆದ್ದರಿಂದ ಅವರಿಗೆ ನಾನು ವಿನಂತಿ ಮಾಡುತ್ತಿದ್ದೇನೆ. ಪುನಃ ನೀವು ಪರಿಶೀಲನೆ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಪುನಃ ಪರಿಶೀಲನೆ ಮಾಡುತ್ತಾರೆ.

ಕುಣಿಗಲ್‌ನಲ್ಲಿ ಹೊಸ ನ್ಯಾಯಾಲಯ ಸಂಕೀರ್ಣ ನಿರ್ಮಾಣ

449 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್‌ನಲ್ಲಿ ನೂತನ ನ್ಯಾಯಾಲಯ ಕಟ್ಟಡ ನಿರ್ಮಿಸುವಲ್ಲಿ ವಿಳಂಬವಾದುದಕ್ಕೆ ಕಾರಣವೇನು?

ಆ) ಈ ಕಟ್ಟಡವು ಯಾವಾಗ ಮುಗಿಯಬೇಕೆಂದು ಷರತ್ತನ್ನು ಗುತ್ತಿಗೆದಾರರಿಗೆ ಹಾಕಲಾಗಿದೆ?

ಇ) ಕಟ್ಟಡವನ್ನು ಶೀಘ್ರವಾಗಿ ಪೂರೈಸಲು ಸರ್ಕಾರದವರ ಕ್ರಮವೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 16.5.94 ರಿಂದ 17.5.95ರ ವರೆಗೆ ಐದು ಬಾರಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, 3 ಪ್ರಕಟಣೆಗಳಿಗೆ ಪ್ರತಿಕ್ರಿಯೆ ಇರಲಿಲ್ಲ ಹಾಗೂ 2 ಬಾರಿ ಸ್ವೀಕರಿಸಲ್ಪಟ್ಟ ಟೆಂಡರ್‌ಗಳು ಷರತ್ತುಗಳನ್ನು

ಒಳಗೊಂಡಿದ್ದು, ಅಸಮಾನ್ಯ ದರಗಳಿಂದ ಕೂಡಿದ ಕಾರಣ ಟೆಂಡರ್‌ಗಳನ್ನು ತಿರಸ್ಕರಿಸಿ, 6ನೇ ಬಾರಿಗೆ ಟೆಂಡರ್‌ರನ್ನು ಆಹ್ವಾನಿಸಿ ಗುತ್ತಿಗೆದಾರರನ್ನು ನೇಮಕ ಮಾಡಲಾಯಿತು.

ಆ) ಗುತ್ತಿಗೆ ಕರಾರಿನಂತೆ ಕಾಮಗಾರಿಯು 15.1.98ಕ್ಕೆ ಪೂರ್ಣಗೊಳ್ಳಬೇಕಾಗಿರುತ್ತದೆ.

ಇ) ಗುತ್ತಿಗೆ ಕರಾರಿನಂತೆ, ಕಾಮಗಾರಿಯನ್ನು ಅನುದಾನದ ಲಭ್ಯತೆಯಂತೆ, 15.1.98ರ ಒಳಗೆ ಪೂರ್ಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಅಧ್ಯಕ್ಷರೇ ಮೂರು ವರ್ಷಗಳ ಹಿಂದೆ ನ್ಯಾಯಾಲಯ ಕಟ್ಟಡದ ಕೆಲಸ ಪ್ರಾರಂಭ ಮಾಡಿದ್ದೀರಿ, ಈಗ ಶೇಕಡ 20ರಷ್ಟೂ ಕೆಲಸ ಆಗಿಲ್ಲ, ಆಮೇಲೆ ಕಳೆದ ಏಳೆಂಟು ತಿಂಗಳಿಂದ ಗುತ್ತಿಗೆದಾರ ಅಲ್ಲಿಂದ ಮೆಶಿನರೀಸ್‌ನೆಲ್ಲ ತಗೊಂಡು ಹೊರಟುಹೋಗಿದ್ದಾನೆ ಕೋರ್ಟ್ ಕಾಂಪ್ಲೆಕ್ಸ್ ಒಳಗಡೆನೆ ಕನ್‌ಸ್ಟ್ರಕ್ಷನ್ ಆಗುತ್ತಿದೆ, ಸಾವಿರಾರು ಜನ ದಿನಾಲೂ ಬಂದು ಹೋಗುತ್ತಿದ್ದಾರೆ. ಕಟ್ಟಡದ ಕೆಲಸ ಅರ್ಧಕ್ಕೆ ನಿಂತಿರುವುದನ್ನು ನೋಡಿದರೆ it reflects the performance of the Government, ಮತ್ತೆ 98ರ ಜನವರಿ ತಿಂಗಳೊಳಗೆ ಕೆಲಸ ಮುಗಿಸುತ್ತೇವೆ ಅಂತ ಉತ್ತರದಲ್ಲಿ ಹೇಳಿದ್ದೀರಿ? 80 ಪರ್ಸೆಂಟ್ ವರ್ಕ್‌ನ್ನು 4 ತಿಂಗಳೊಳಗೆ ಮಾಡುವುದಕ್ಕೆ ಸಾಧ್ಯವಿದೆಯೇ? ಗುತ್ತಿಗೆದಾರ ಈಗಾಗಲೇ ಹೊರಟುಹೋಗಿರುವುದರಿಂದ ನಿಮ್ಮ ಇಲಾಖೆಯಿಂದ ಮಾಡಿಸುತ್ತೀರಾ ಅಥವಾ ಹೊಸ ಗುತ್ತಿಗೆದಾರರನ್ನು ನೇಮಿಸುತ್ತೀರಾ? ಈಗ ಹಳೆ ಕಟ್ಟಡದಲ್ಲಿ ನ್ಯಾಯಾಲಯ ನಡೆಯುತ್ತಿರುವುದರಿಂದ ಕಕ್ಷಿದಾರರುಗಳಿಗೆ ವಕೀಲರಿಗೆಲ್ಲ ಬಹಳ ತೊಂದರೆಯಾಗಿ ಬಿಟ್ಟಿದೆ. ಅದನ್ನು ಅತಿ ಶೀಘ್ರವಾಗಿ ಮುಗಿಸಲು ನಿಮ್ಮ ಕಾರ್ಯಕ್ರಮ ಏನಿದೆ ಅಂತ ಹೇಳಬೇಕು.

ಶ್ರೀ ಸಿ.ಎಂ. ಉದಾಸಿ : ಅಧ್ಯಕ್ಷರೇ, ಸದಸ್ಯರು ಹೇಳಿದಂತೆ ಮೂರು ವರ್ಷಗಳ ಹಿಂದೆ ಕೆಲಸ ಪ್ರಾರಂಭವಾಗಿತ್ತು. ಅಂದರೆ 16.1.91ರಿಂದ ಕೆಲಸ ಪ್ರಾರಂಭವಾಯಿತು. ಗುತ್ತಿಗೆದಾರರೊಡನೆ ಅಗ್ರಿಮೆಂಟಾಗಿದ್ದು 10.1.96ರಂದು, ನನ್ನ ಹತ್ತಿರ ಆ ದಾಖಲೆ ಇದೆ. ಈ ಕೆಲಸಕ್ಕಾಗಿ ಇಲ್ಲಿಯವರೆಗೆ 20 ಲಕ್ಷ ವೆಚ್ಚವಾಗಿದ್ದು ಇದು 36 ಲಕ್ಷ ರೂ.ಗಳ ಕೆಲಸ. ಗುತ್ತಿಗೆದಾರರು ಕೆಲಸವನ್ನು ಬಂದ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಗುತ್ತಿಗೆದಾರರಿಗೆ ವಹಿಸಿಕೊಟ್ಟ ಕರಾರು ಪ್ರಕಾರ 15.1.98ಕ್ಕೆ ಅವರು ಕೆಲಸ ಮುಗಿಸಬೇಕು. ಗುತ್ತಿಗೆದಾರರು ಕೆಲಸ ನಿಲ್ಲಿಸಿರುವುದನ್ನು ತೀವ್ರವಾಗಿ ಪರಿಗಣಿಸಿ ಅತಿ ಶೀಘ್ರದಲ್ಲೇ ಕೆಲಸ ಮುಗಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮೂರು ವರ್ಷಗಳ ಹಿಂದೆ ಅಲ್ಲಿ ಶಂಕುಸ್ಥಾಪನೆ ಆಯಿತು, ಆದರೆ ಇದುವರೆಗೂ ನಡೆದಿರುವುದು ಬರೀ 20 ಪರ್ಸೆಂಟ್ ಕೆಲಸ ಮಾತ್ರ. ಬೇರೆ ಕಡೆ ಎಲ್ಲೋ ಚೆನ್ನಾಗಿರುವ ಕೆಲಸ ಮಾಡುವುದಕ್ಕೆ ಅವನು ಎಲ್ಲಾ ಎತ್ತಿಕೊಂಡು ಹೋಗಿಬಿಟ್ಟಿದ್ದಾನೆ. ಸಾವಿರಾರು ಜನ ಅಲ್ಲಿಗೆ ಬರುವವರು ಏನಪ್ಪ ಹೀಗೆ ನಿಂತುಹೋಗಿಬಿಟ್ಟಿದೆ ಅಂದಾಗ I feel that it reflects the performance of the Government.

MR. SPEAKER : I will tell you, ಅನೇಕ ಕಡೆ ಆಂಕ್ಸೈಟಿಯಿಂದ ವಿವಿಧ ಸಂದರ್ಭಗಳಲ್ಲಿ ಶಂಕುಸ್ಥಾಪನೆ ಮಾಡಿಸಿಬಿಟ್ಟಿರುತ್ತೇವೆ. ಅದಕ್ಕೆ ಆಡಳಿತಾತ್ಮಕ ಒಪ್ಪಿಗೆ ಸಿಕ್ಕಿದೆಯೋ ಇಲ್ಲವೋ ಆರ್ಥಿಕ ಪ್ರಾವಿಶನ್ ಇದೆಯೋ ಇಲ್ಲವೋ ಎಂದು ಏನೂ ನೋಡುವುದಿಲ್ಲ. ಅಟ್‌ಲೀಸ್ಟ್ ನಾವು ಆತ್ಮವಂಚನೆ ಮಾಡಿಕೊಳ್ಳದೆ ಇಲ್ಲಿಂದೀಚೆಗೆ ಯಾವುದೇ ಶಾಸಕರು ಶಂಕುಸ್ಥಾಪನೆ ಮಾಡಿಸುವಾಗ ಏನು ಖಾತರಿ ಮಾಡಿಕೊಳ್ಳಬೇಕು ಅಂದರೆ ಈ ದಿವಸ ಶಂಕುಸ್ಥಾಪನೆ ಮಾಡಿದರೆ ಮಾರನೇ ದಿವಸ ಕೆಲಸ ಪ್ರಾರಂಭವಾಗಬೇಕು ಆಡಳಿತ ಒಪ್ಪಿಗೆ ಸಿಕ್ಕಿ ಟೆಂಡರ್ಸ್ ಕರೆದು ಅದು ಫೈನಲೈಸ್ ಮಾಡಿ ಎಲ್ಲಾ ರೆಡಿಯಾಗಿದ್ದರೆ, ಮಾತ್ರ ಶಂಕುಸ್ಥಾಪನೆ ಮಾಡುವುದಕ್ಕೆ ನಾವು ಒಪ್ಪಿಕೊಳ್ಳಬೇಕು. ಬೇರೆಬೇರೆ ಕಾರಣಗಳಿಗೆ ನಾವು ಹಾಗೆ ಮಾಡುವುದರಿಂದ ಹೀಗೆಲ್ಲ ಆಗುತ್ತದೆ. We should avoid it.

ಶ್ರೀ ಸಿ.ಎಂ. ಉದಾಸಿ : 16-5-94 ರಿಂದ 17-5-95 ರವರೆಗೆ 5 ಸಲ ಟೆಂಡರ್‌ನ್ನು ಕರೆಯಲಾಗಿತ್ತು ಆ ಐದು ಸಲಕ್ಕೂ ಪ್ರತಿಕ್ರಿಯೆ ಬರಲಿಲ್ಲ. 6ನೇ ಬಾರಿಗೆ ಟೆಂಡರ್ ಒಪ್ಪಿಗೆಯಾದ ಮೇಲೆ 10-1-96 ರಂದು ಕೆಲಸ ಪ್ರಾರಂಭಿಸುವುದಕ್ಕೆ ಅವರೊಂದಿಗೆ ಅಗ್ರಿಮೆಂಟಾಗಿದೆ. 16-1-96 ರಲ್ಲಿ ಅವರು ಕೆಲಸ ಪ್ರಾರಂಭ ಮಾಡಿದರು. ಮಾನ್ಯ ಸದಸ್ಯರ ಕಳಕಳಿ ನನಗೆ ಗೊತ್ತಿದೆ. ಅತಿಶೀಘ್ರದಲ್ಲೇ ಈ ಕೆಲಸ ಆಗಬೇಕಾಗಿದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : 1994ರ ಏಪ್ರಿಲ್ ತಿಂಗಳಿನಲ್ಲಿ ಶಂಕುಸ್ಥಾಪನೆಯಾದಾಗ ಉಚ್ಚನ್ಯಾಯಾಲಯದ ನ್ಯಾಯಾಧೀಶರುಗಳು ಮತ್ತೆ ಕೆಲವು ಸಚಿವರು ಎಲ್ಲ ಬಂದಿದ್ದರು. ತಾವು ಹೇಳುವುದು ನನಗೆ ಅರ್ಥವಾಗುತ್ತದೆ. ಆದರೆ ನನ್ನ ಕಳಕಳಿ ಏನೆಂದರೆ ಸಾವಿರಾರು ಜನ ಅಲ್ಲಿ ಬಂದು ಹೊಗುತ್ತಾರೆ. ಕೆಲಸ ನಿಂತುಹೋಗಿರುವುದು ನೋಡಿದಾಗ ಬಹಳ ಅಭಾಸವಾಗಿ ಕಾಣಿಸುತ್ತದೆ. ಹಿಂದಿನದಕ್ಕೆ ನಾನು ಹೋಗುವುದಿಲ್ಲ ಅದೇನೆ ಇದ್ದುಕೊಳ್ಳಲಿ, ದಯಮಾಡಿ ಆದಷ್ಟು ಶೀಘ್ರವಾಗಿ ಇದನ್ನು ಮಾಡಿ ಮುಗಿಸುವುದಕ್ಕೆ ತಾವು ಕಾರ್ಯಕ್ರಮ ರೂಪಿಸಿಕೊಳ್ಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ತಾವು ಹೇಳಿದ ಸ್ಥಿತಿ ಇವತ್ತು ನಿರ್ಮಾಣವಾಗಿಲ್ಲ. ತುಮಕೂರು ಜಿಲ್ಲೆಯಲ್ಲಿ 3 ರಿಂದ 4 ಕೋಟಿ ಕಾಂಪ್ಲೆಕ್ಸ್‌ಗೆ ಆಡಳಿತ ಒಪ್ಪಿಗೆ ಆಗಿದೆ, ಟೆಂಡರ್ ಆಗಿದೆ, ಎಲ್ಲ ಕಾರ್ಯಕ್ರಮ ಆಗಿ ಲಿಂಟಲ್ ರೂಫ್ ಮಟ್ಟಕ್ಕೆ ಕಟ್ಟಡಗಳು ಬಂದಾಗ ಎಲ್‌ಒಸಿ ಕೊಡಲಿಲ್ಲ, ನಮಗೆ 50,60 ಸಾವಿರ ದುಡ್ಡು ಕೊಡುತ್ತಾರೆ ಅಂತ ಹೇಳಿ ಇಡೀ ಜಿಲ್ಲೆಯಲ್ಲಿ ಕೆಲಸಗಳು ಸ್ಥಗಿತವಾಗಿವೆ. ನಾವು ಸಚಿವರ ಗಮಕ್ಕೆ ಇದನ್ನು ತಂದಿದ್ದೇವೆ. ಸ್ವಾಮಿ, ಲಿಂಟಲ್ ರೂಫ್ ಲೆವೆಲ್‌ಗೆ ಹೋಗಿ 60 ಲಕ್ಷಕ್ಕೆ ಆಗಬೇಕಾದ ಕಟ್ಟಡ ಹಾಗೇ ನಿಂತಿದ್ದು, ಕಂಟ್ರಾಕ್ಟರ್ ವಾಪಸ್ ಹೋಗಿದ್ದಾನೆ, ರಿಲೀಸ್ ಮಾಡುವುದಕ್ಕೆ ಇವರಿಗೆ ಶಕ್ತಿ ಇಲ್ಲ ಅವನಿಗೆ ಬಿಲ್ ಕ್ಲಿಯರ್ ಮಾಡಿಲ್ಲ ಈ ಕಡೆ ಎಲ್‌ಒಸಿ ರಿಲೀಸಾಗುತ್ತಿಲ್ಲ, ಜ್ಯುಡಿಶಿಯರಿಗೆ ಈ ಸ್ಥಿತಿ ಯಾವತ್ತೂ ಬಂದಿರಲಿಲ್ಲ ಅಧ್ಯಕ್ಷರೇ. ಸಾಮಾನ್ಯವಾಗಿ ಒಂದು ಕೋರ್ಟ್ ಕೆಲಸ ಆರಂಭವಾದರೆ 3 ರಿಂದ 4 ವರ್ಷಕ್ಕೆ ಮುಗಿಯುತ್ತಿತ್ತು, ಬೇಡ ಐದು ವರ್ಷಕ್ಕಾದರೂ ಮುಗಿಸುವಂತಹ ಕಾರ್ಯಕ್ರಮ ಸಚಿವರು ಹಾಕಿಕೊಳ್ಳದೇಹೋದರೆ, ಪ್ರತಿ ಪ್ರಶ್ನೆಗೂ ಪಿಡಬ್ಲ್ಯೂಡಿ ಮಿನಿಸ್ಟರ್ ಕೊಟ್ಟಿರುವ ಉತ್ತರ ನೋಡಿ ಆರ್ಥಿಕ ಲಭ್ಯತೆ ಮೇಲೆ ಪರಿಶೀಲಿಸಲಾಗುವುದು,

ಎಂದರೆ ಯಾವಾಗ ಇದಕ್ಕೆ ಲಭ್ಯತೆ ಬರುತ್ತದೆ? ನೀವು ಆಡಳಿತ ಒಪ್ಪಿಗೆ ಏಕೆ ಕೊಡುತ್ತೀರಿ? ನಿಮ್ಮ ಹತ್ತಿರ ಗ್ರಾಂಟ್ ಇಲ್ಲದಿದ್ದರೆ ಟೆಂಡರ್ ಏಕೆ ಕರೆಯುತ್ತೀರಿ? ವರ್ಕ್ ಏಕೆ ಸ್ಟಾರ್ಟ್ ಮಾಡಿಸುತ್ತೀರಿ? ನಾವೇನು ಅವರಿಗೆ ಉತ್ತರ ಹೇಳಬೇಕು ಅಧ್ಯಕ್ಷರೇ?

ಅಧ್ಯಕ್ಷರು : ಆಯಿತು, ಒಂದು ಊಹೆಯ ಪ್ರಶ್ನೆ, ನಾಳೆ ಮಾಧುಸ್ವಾಮಿ ಲೋಕೋಪಯೋಗಿ ಸಚಿವರಾಗಿರುತ್ತಾರೆ, ನೀವೇನು ಆಗ ಉತ್ತರ ಕೊಡುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ಆಡಳಿತ ಒಪ್ಪಿಗೇನೆ ಕೊಡಿಸುತ್ತಿರಲಿಲ್ಲ, ಒನ್ ಥರ್ಡ್ ಹಣ ಎಂಬುದನ್ನು ರಿಲ್ಯಾಕ್ಸ್ ಮಾಡಿ ಒನ್ ಫಿಫ್ತ್ ಅಂತ ಮಾಡಿಕೊಂಡು - ಎರಡೂ ಇಲ್ಲ ಇವತ್ತು.

ಅಧ್ಯಕ್ಷರು : ಮಾಧುಸ್ವಾಮಿಯವರೇ ನಾವೊಂದು ವಿಷವೃತ್ತವನ್ನು ರಚಿಸಿಕೊಂಡಿದ್ದೇವೆ. ನಾವೂ ನೀವೂ ಎಲ್ಲರೂ ಅದರ ಮಧ್ಯೆ ಸಿಕ್ಕಿ ನರಳುತ್ತಿದ್ದೇವೆ he will try to expedite the work.

ಶ್ರೀ ಸಿ.ಎಂ. ಉದಾಸಿ : ಅಧ್ಯಕ್ಷರೇ ಕಟ್ಟಡಗಳಿಗಾಗಿ, ಈ ವರ್ಷ 35ರಿಂದ 40 ಕೋಟಿ ಹಣ ಬೇಕಾಗುತ್ತದೆ. ಆದರೆ ಕೇವಲ 10 ಕೋಟಿ ಮಾತ್ರ ಅವಕಾಶ ಇರುವಾಗ ಎಲ್ಲ ಕಟ್ಟಡಗಳನ್ನೂ ಏಕಕಾಲಕ್ಕೆ ಮುಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಯಾವುದೇ ಹೊಸ ಕಾಮಾಗಾರಿಗಳನ್ನು ಇವತ್ತು ಪ್ರಾರಂಭ ಮಾಡಿಲ್ಲ. ಅನೇಕ ಕಾಮಗಾರಿಗಳನ್ನು ಏಕಕಾಲಕ್ಕೆ ಪ್ರಾರಂಭ ಮಾಡಿರುವುದರಿಂದ ಈ ಪರಿಸ್ಥಿತಿ ಆಗಿದೆ, ಇದನ್ನು ಅತಿ ಶೀಘ್ರದಲ್ಲಿ ಮುಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಗಿರಿಭತ್ಯೆ ಕುರಿತು

437 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಗಿರಿಭತ್ಯೆಯನ್ನು (ಹಿಲ್ ಅಲೋಯನ್ಸ್) ಮಡಿಕೇರಿ ತಾಲ್ಲೂಕಿನಲ್ಲಿ ಮಾತ್ರ ಕೊಡಲಾಗುತ್ತಿದೆ ಎಂದು ತಿಳಿದು ಬಂದಿದೆ. ಇದು ನಿಜವೇ?

ಆ) ಕೊಡಗು ಜಿಲ್ಲೆ ಪೂರ್ತಿ ಗಿರಿಬೆಟ್ಟಗಳಿಂದ ತುಂಬಿರುವುದರಿಂದ ಗಿರಿಭತ್ಯೆಯನ್ನು ಕೊಡಗು ಜಿಲ್ಲೆಗೆ ಪೂರ್ತಿ ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಮಡಿಕೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಮಾತ್ರ ಗಿರಿಭತ್ಯೆಯನ್ನು ನೀಡಲಾಗುತ್ತಿದೆ.

ಆ) ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಆದೇಶಗಳನ್ವಯ ರಾಜ್ಯ ಸರ್ಕಾರಿ ನೌಕರರುಗಳಿಗೆ ನೀಡಲಾಗುತ್ತಿರುವ ಗಿರಿ ಭತ್ಯೆ ದರಗಳು ಮತ್ತು ಸ್ಥಳಗಳು, 3ನೇ ಮತ್ತು 4ನೇ ವೇತನ ಆಯೋಗದ